

ಈ ಆಯಾಸ ತಪ್ಪಿಸಿಕೊಳ್ಳಲು ಟ್ರೈಪ್ಯಾಡುಗಳ ಕಟ್ಟಿಕೊಂಡಿದ್ದೆವಾದರೂ ಅದು ಹಕ್ಕಿಯನ್ನು ನೆಲಮಟ್ಟದಿಂದ ಸೆರೆ ಹಿಡಿಯುವ ನಮ್ಮ ಆಕಾಂಕ್ಷೆಗೆ ಅಡ್ಡಿಯಾಗುತ್ತಿತ್ತು. ತುಂಬಾ ಸಲ ಕ್ಯಾಮೆರಾ ಅಲ್ಲಾಡಿ ಚಿತ್ರ ಹಾಳಾಗದಂತೆ ತಡೆಯುವ ನಮ್ಮ ಪಾಲಿನ ಗಟ್ಟಿ ಪಿಂಡವೇ ಈ ಟ್ರೈಪ್ಯಾಡು. ಆದರೆ, ಇದನ್ನು ಗಟ್ಟಿನೆಲ ಬಿಟ್ಟು ಬೇರೆ ಕಡೆ ಉಪಯೋಗಿಸುವುದು ಅಷ್ಟು ಸಲೀಸಲ್ಲ.

ಸುಲಲಿತವಾಗಿ ಎಲ್ಲಾ ದಿಕ್ಕುಗಳಲ್ಲೂ ಕ್ಯಾಮೆರಾವನ್ನು ಪಟಪಟ ತಿರುಗಿಸಿ ಪಟ ತೆಗೆಯಲು ಅನೇಕ ಸಲ ಟ್ರೈಪ್ಯಾಡಿನಲ್ಲಿ ಸಾಧ್ಯವಾಗುವುದಿಲ್ಲ. ಆಗ ಕ್ಯಾಮೆರಾ ಕೈಲಿದ್ದರೆ ಯಾವ ಭವಬಂಧನಗಳೂ ಅದಕ್ಕೆ ಲಗತ್ತಾಗದಿದ್ದರೆ ಉತ್ತಮ. ಸಲೀಸಾಗಿ ಎತ್ತ ಬೇಕಾದರೂ ಕ್ಯಾಮೆರಾ ಮೂತಿ ತಿರುಗಿಸಬಹುದು. ಹಕ್ಕಿಯ ಬೇಟೆ ಕೆಲವೇ ಕ್ಷಣಗಳಲ್ಲಿ ನಡೆದು ಹೋಗುವ ವಿದ್ಯಮಾನ. ಈ ಸಂದರ್ಭ ಚಿತ್ರೀಕರಿಸಲು ಸಂಯಮ ಮತ್ತು ಚಾಕಚಕ್ಯತೆ ಬೇಕಾಗುತ್ತದೆ. ಹೆಚ್ಚೂ ಕಡಿಮೆ ಬೆಳಕಿನ ವೇಗದಲ್ಲೇ ನಮ್ಮ ಬುದ್ಧಿ, ಆಲೋಚನೆ ಮತ್ತು ನಿರ್ಧಾರಗಳು ಕೆಲಸ ಮಾಡಬೇಕಾಗುತ್ತದೆ.

ಜೊತೆಗೆ ದೂರದಲ್ಲಿರುವ ಹಕ್ಕಿಯ ಚಿತ್ರ ತೆಗೆಯುವಾಗ ಕ್ಯಾಮೆರಾ ಕೊಂಚವೂ ಅಲ್ಲಾಡದೆ ಗರುಡಗಂಭದಂತೆ ಭದ್ರವಾಗಿ ನಿಂತಿರಬೇಕು. ಬೆಳಕಿನ ಏರುಪೇರುಗಳನ್ನು ತಕ್ಷಣ ಗ್ರಹಿಸಿ ಸೆಟ್ಟಿಂಗ್ ಗಳಲ್ಲಿ ಅಗತ್ಯ ಮಾರ್ಪಾಡು ಮಾಡಿಕೊಳ್ಳುತ್ತಿರಬೇಕು. ನೀವು ತೆಗೆಯುವ ಚಿತ್ರ ಫೋಕಸ್ ಆಗಿರಬೇಕು. ನಿಮ್ಮ ಫ್ರೇಮಿನಿಂದ ಚಿತ್ರ ಹಿಂದೂ ಮುಂದೂ ಹೋಗದಂತೆ ನಿಗಾ ವಹಿಸಬೇಕು. ಇಷ್ಟೆಲ್ಲಾ ಬೇಕುಗಳೆಂಬ ಬೇಡಿಕೆಗಳು ಒಳ್ಳೆಯ ಪಟ ತೆಗೆಯುವಾಗ ಬೇಕಾಗುತ್ತವೆ. ಆದರೆ, ತುಂಬಾ ಸಲ ಅವಸರದಲ್ಲಿ ಈ ಬೇಕುಗಳಿಗೆ ಬ್ರೇಕು ಬಿದ್ದು ಬುದ್ಧಿಯೇ ಮಂಕಾಗಿ ಬಿಡುತ್ತದೆ. ಅವಸರದಲ್ಲಿ ಏನು ಮಾಡುವುದೋ ತಿಳಿಯದೆ ನಾನಂತೂ ಸ್ತಬ್ಧನಾಗಿ ಬಿಡುತ್ತೇನೆ. ನನ್ನ ಬುದ್ಧಿಶಕ್ತಿಯ ಕೆಪಾಸಿಟಿಯೇ ಕಡಿಮೆ ಇರುವಾಗ ಯಾರೇನು ಮಾಡಲು ಸಾಧ್ಯ? ಹೀಗಾಗಿ, ನಾನು ಅನೇಕ ಒಳ್ಳೆಯ ಪಟಗಳನ್ನು ಸೆಳೆಯುವ ಅವಕಾಶದಿಂದ ಸದಾ ವಂಚಿತನಾಗಿದ್ದೇನೆ. ಬರೀ ಕ್ಯಾಮೆರಾ ಇದ್ದರಷ್ಟೇ ಸಾಲದು. ಆಯಾ ಸಮಯ ಸಂದರ್ಭಕ್ಕೆ ಕ್ಯಾಮೆರಾವನ್ನು ಮತ್ತು ನಮ್ಮ ಬುದ್ಧಿಶಕ್ತಿಯನ್ನು ಹೇಗೆ ದುಡಿಸಿಕೊಳ್ಳಬೇಕು ಎಂಬ ಜಾಣ್ಮೆಯೂ ಇರಬೇಕು.

ನಾವೀಗ ನೀರು ನಿಂತ ಜೌಗು ಜಾಗೆಯಲ್ಲಿದ್ದೆವು. ನಮ್ಮ ದೋಣಿ ಇದ್ದ ಜಾಗವಷ್ಟೇ ನೀರು. ಅತ್ತಿತ್ತ ಸರಿದರೆ ಆಳವಾದ ಕೆಸರಿತ್ತು. ಮುಂದೆ ಬೆಳೆದ ಹುಲ್ಲಿನ ಕರಿ ಕೆಂಬರಲ ತನ್ನ ಬೇಟೆಗಾಗಿ ತಡಕಾಡುತ್ತಿತ್ತು. ಕೊಕ್ಕನ್ನು ಪಟಪಟನೆ ಕೆಸರಲ್ಲಿ ಕುಕ್ಕಿ ತನ್ನ ಬಲಿ ಎಲ್ಲಿದೆ ಎಂದು ತಪಶೀಲು ಮಾಡುತ್ತಿತ್ತು. ಕೊಕ್ಕನ್ನು ಮಿಂಚಿನ ವೇಗದಲ್ಲಿ ಬಳಸಬಲ್ಲ ಈ ಖಗವನ್ನು ಇಂಗ್ಲೀಷಿನಲ್ಲಿ